# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

ದಿನಾಂಕ: 31.01.2019 ರಂದು ಬೆಳಿಗ್ಗೆ 11:30 ಗಂಟೆಗೆ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರ ಕೊಠಡಿಯಲ್ಲಿ ನಡೆದ 2018–19ನೇ ಸಾಲಿನ ನಾಲ್ಕನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು

ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ಸಿದ್ದೇಗೌಡ ವೈ.ಎಸ್., ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಅ. ದೇವೇಗೌಡ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 3. | ಶ್ರೀ ಕೃಷ್ಣಪ್ಪ<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವೇಕೆರೆ | ಸದಸ್ಯರು |
| 4. | ಶ್ರೀ ಕೃಷ್ಣಮೂರ್ತಿ ಬಿ.ಆರ್.<br>ಪ್ರಾಂಶುಪಾಲರು, ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು | ಸದಸ್ಯರು |
| 5. | ಶ್ರೀ ಪುರುಷೋತ್ತಮ ರಾವ್ ಸಿಂಧ್ಯ | ಸದಸ್ಯರು |
| 6. | ಶ್ರೀ ನರಸಿಂಹಮೂರ್ತಿ ಸಿ.ಎನ್. | ಸದಸ್ಯರು |
| 7. | ಶ್ರೀ ನಾರಾಯಣ ಎಂ. | ಸದಸ್ಯರು |
| 8. | ಡಾ. ಶಿವಲಿಂಗಸ್ವಾಮಿ ಎಚ್.ಕೆ., ಪ್ರಾಧ್ಯಾಪಕರು | ಸದಸ್ಯರು |
| 9. | ಡಾ. ಕೇಶವ, ಪ್ರಾಧ್ಯಾಪಕರು | ಸದಸ್ಯರು |
| 10. | ಡಾ. ರವೀಂದ್ರ ಕುಮಾರ್ ಬಿ., ಪ್ರಾಧ್ಯಾಪಕರು | ಸದಸ್ಯರು |
| 11. | ಡಾ. ಗುಂಡೂರ್ ನಿಶೀಮಪ್ಪ., ಪ್ರಾಧ್ಯಾಪಕರು | ಸದಸ್ಯರು |
| 12. | ಡೀನರು, ಕಲಾ ನಿಕಾಯ | ಸದಸ್ಯರು |
| 13. | ಡೀನರು, ಕಾನೂನು ನಿಕಾಯ | ಸದಸ್ಯರು |
| 14. | ಡೀನರು, ವಿಜ್ಞಾನ ನಿಕಾಯ | ಸದಸ್ಯರು |



31/01

| | | |
|---|---|---|
| 15. | ಡೀನರು, ವಾಣಿಜ್ಯ ಮತ್ತು ವ್ಯವಹಾರ ನಿಕಾಯ | ಸದಸ್ಯರು |
| 16. | ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 17. | ಡಾ. ಕೊಟ್ರೇಶ್ ಎಂ.<br>ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 18. | ಡಾ. ಎಲ್.ಪಿ. ರಾಜು<br>ಯೋಜನೆ, ಮೇಲ್ವಿಚಾರಣೆಯ ಸಮಿತಿಯ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 19. | ಡಾ. ಬಿ.ಟಿ. ಸಂಪತ್ ಕುಮಾರ್., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ | ಸದಸ್ಯರು |
| 20. | ಹಣಕಾಸು ಅಧಿಕಾರಿಗಳು (ಪ್ರ) | ಸದಸ್ಯರು |
| 21. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 22. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 23. | ಪ್ರೊ. ಕೆ. ನರಹರಿ, ನಿವೃತ್ತ ಪ್ರಾಧ್ಯಾಪಕರು, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | ಸರ್ಕಾರದಿಂದ ವಿಶೇಷ ಆಹ್ವಾನಿತರು |

ಹಾಜರಾಗದ ಸದಸ್ಯರು

| | | |
|---|---|---|
| 1. | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು | ಸದಸ್ಯರು |
| 2. | ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು | ಸದಸ್ಯರು |
| 3. | ಶ್ರೀ ಕಾಂತರಾಜ್ (ಬಿಎಂಎಲ್), ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು | ಸದಸ್ಯರು |
| 4. | ಶ್ರೀ ಜಗದೀಶ್ ಎನ್.ಎಚ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೊಣವಿನಕೆರೆ | ಸದಸ್ಯರು |
| 5. | ಶ್ರೀ ರಾಜಣ್ಣ ಕೆ.ಎಂ., ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು. | ಸದಸ್ಯರು |
| 6. | ಪ್ರೊ. ಪರಶುರಾಮ್ ಕೆ.ಜಿ., ಪ್ರಾಧ್ಯಾಪಕರು | ಸದಸ್ಯರು |

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ವೈ.ಎಸ್. ಸಿದ್ದೇಗೌಡರವರು ದಿನಾಂಕ:31.01.2019ರ ಗುರುವಾರ ಬೆಳಿಗ್ಗೆ 11:30 ಕ್ಕೆ ನಡೆದ 2018-19ನೇ ಸಾಲಿನ ನಾಲ್ಕನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಸಭೆಯ ಕಾರ್ಯಸೂಚಿಯನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

31/01

| ಕ್ರ. ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| | | ಸಿಂಡಿಕೇಟ್ ವಿಭಾಗ | |
| 01 | – | ದಿನಾಂಕ: 27.10.2018ರಂದು ನಡೆದ ಮೂರನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳ ದೃಢೀಕರಣ. | ದಿನಾಂಕ:27.10.2018 ರಂದು ನಡೆದ ಮೂರನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಯನ್ನು ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರ ಗಮನಕ್ಕೆ ತಂದು ಸದರಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದರು. ಸದರಿ ಸಭೆಯ ನಡವಳಿಯನ್ನು ಪರಿಶೀಲಿಸಿದ ಸಭೆಯು ನಡಾವಳಿಯನ್ನು ಯತಾವತ್ತಾಗಿ ದೃಢೀಕರಿಸಿತು. |
| | | ಕಾಲೇಜು ಅಭಿವೃದ್ಧಿ ಪರಿಷತ್ | |
| 02 | 2018–19.ಸಾ.ವಿ.ಪ.04<br>ಕಾ.ಅ.ಪ –01 | ಅ) ಶ್ರೀ ಭಗವಾನ್ ಮಂಜುನಾಥೇಶ್ವರ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರು ಮತ್ತು ಸದಸ್ಯರುಗಳು ಬದಲಾವಣೆ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಆಡಳಿತ ಮಂಡಳಿಯಿಂದ ಸಾಮಾನ್ಯ ವರ್ಗದ ಆಡಳಿತ ಮಂಡಳಿಗೆ ಬದಲಾವಣೆಗೆ ಅನುಮೋದನೆ ನೀಡುವ ಕುರಿತು.<br>ಆ) 2018–19ನೇ ಶೈಕ್ಷಣಿಕ ಸಾಲಿನಿಂದ ಬಿ.ಸಿ.ಎ. ಕೋರ್ಸ್‌ನ್ನು ಸಂಪೂರ್ಣವಾಗಿ ಮುಚ್ಚುವುದಾಗಿ ತಿಳಿಸಿರುವ ಕುರಿತು. | ಅ) ಶ್ರೀ ಭಗವಾನ್ ಮಂಜುನಾಥೇಶ್ವರ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರು ಮತ್ತು ಸದಸ್ಯರುಗಳು ಬದಲಾವಣೆ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಆಡಳಿತ ಮಂಡಳಿಯಿಂದ ಸಾಮಾನ್ಯ ವರ್ಗದ ಆಡಳಿತ ಮಂಡಳಿ ಬದಲಾವಣೆಗೆ ಮನವಿ ಸಲ್ಲಿಸಿರುವುದನ್ನು ಪರಿಶೀಲಿಸಿದ ಸಭೆಯು ಸದರಿಯವರ ಪ್ರಸ್ತಾವನೆಯನ್ನು ಒಪ್ಪಿ ಸರ್ಕಾರದ ಅನುಮೋದನೆಗೆ ಕಳುಹಿಸುವಂತೆ ತೀರ್ಮಾನಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br>ಆ) ಬಿ.ಸಿ.ಎ. ಕೋರ್ಸ್‌ನ್ನು 2018–19ನೇ ಸಾಲಿನಿಂದ ಸಂಪೂರ್ಣವಾಗಿ ಮುಚ್ಚುವುದಾಗಿ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿದ ಸಭೆಯು ವಿದ್ಯಾರ್ಥಿಗಳಿಗೆ ಅನಾನುಕೂಲ ವಾಗದಂತೆ ಕೋರ್ಸ್‌ನ್ನು ಮುಚ್ಚಲು ಒಪ್ಪಿತು ಹಾಗೂ ಈ ಕುರಿತು ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 03 | 2018–19.ಸಾ.ವಿ.ಪ.04<br>ಕಾ.ಅ.ಪ –02 | ತುಮಕೂರಿನ ನಯಾಲ ಶಿಕ್ಷಣ ಮಹಾವಿದ್ಯಾಲಯ ಕಾಲೇಜಿಗೆ 2018–19ನೇ ಶೈಕ್ಷಣಿಕ ಸಾಲಿನ ಸಂಯೋಜನೆಯನ್ನು ನವೀಕರಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸ್ಥಿರೀಕರಿಸುವ ಕುರಿತು | ತುಮಕೂರಿನ ನಯಾಲ ಶಿಕ್ಷಣ ಮಹಾವಿದ್ಯಾಲಯ ಕಾಲೇಜಿಗೆ 2018–19ನೇ ಶೈಕ್ಷಣಿಕ ಸಾಲಿನ ಸಂಯೋಜನೆಯನ್ನು ನವೀಕರಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

31/01

| | | | |
|---|---|---|---|
| **ಪಿ.ಹೆಚ್.ಡಿ. ವಿಭಾಗ** | | | |
| 04 | 2018–19.ಸಾ.ವಿ.ಪ.04<br>ಪಿ.ಹೆಚ್.ಡಿ.–01 | ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ವಿನಿಯಮ 2017 ರನ್ವಯ ಅರ್ಥಶಾಸ್ತ್ರ ಮತ್ತು ಪರಿಸರ ವಿಜ್ಞಾನ ವಿಷಯಗಳ ಪಠ್ಯಕ್ರಮಗಳನ್ನು ಅನುಮೋದಿಸುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ವಿನಿಯಮ 2017 ರನ್ವಯ ಅರ್ಥಶಾಸ್ತ್ರ ಮತ್ತು ಪರಿಸರ ವಿಜ್ಞಾನ ವಿಷಯಗಳ ಪಠ್ಯಕ್ರಮಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | | | |
| 05 | 2018–19.ಸಾ.ಸಿಂ.04<br>ಸಾ/ಅ.ವಿ–01 | ವಿಶ್ವವಿದ್ಯಾನಿಲಯದಲ್ಲಿ ದೂರಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭಿಸಲು ಪೂರ್ವಭಾವಿ ಸಿದ್ಧತೆಗಳನ್ನು ಕೈಗೊಳ್ಳುವ ಕುರಿತು. | ಸದರಿ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ದೂರಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭಿಸಲು ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಈಗಾಗಲೇ ಕೈಗೊಂಡಿರುವ ಕ್ರಮವನ್ನು ಅನುಮೋದಿಸಿ, ಈ ಸಂಬಂಧ ಕೆಳಕಂಡ ಅಧ್ಯಕ್ಷರು/ ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಲು ಹಾಗೂ ದೂರಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭಿಸುವ ಸಂಬಂಧ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ತೀರ್ಮಾನಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>**ಸಲಹಾ ಸಮಿತಿ:**<br>1. ಪ್ರೊ. ಎನ್.ಎಸ್. ರಾಮೇಗೌಡ, ವಿಶ್ರಾಂತ ಕುಲಪತಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು – **ಅಧ್ಯಕ್ಷರು**<br>2. ಪ್ರೊ. ಚಂಬಿ ಪುರಾಣಿಕ್, ವಿಶ್ರಾಂತ ಡೀನರು, ಕ.ರಾ.ಮು.ವಿ. ಹಾಗೂ ವಿಶ್ರಾಂತ ಸದಸ್ಯರು, ಯು.ಜಿ.ಸಿ. ದೂರಶಿಕ್ಷಣ ಪರಿಷತ್ – **ಸದಸ್ಯರು**<br>3. ಪ್ರಾದೇಶಿಕ ನಿರ್ದೇಶಕರು, ಇಂಧಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ, ಬೆಂಗಳೂರು (IGNOU) – **ಸದಸ್ಯರು**<br>4. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾನಿಲಯ – **ವಿಶೇಷ ಆಹ್ವಾನಿತರು**<br>5. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ತುಮಕೂರು ವಿಶ್ವವಿದ್ಯಾನಿಲಯ– **ಸಂಚಾಲಕರು.** |

| | | | |
|---|---|---|---|
| | | ಶೈಕ್ಷಣಿಕ ವಿಭಾಗ | |
| 06 | 2018–19.ಸಾ.ವಿ.ಪ.04 ಶೈ.ವಿ–01 | ಗಡಿನಾಡು/ ಹೊರನಾಡು ಕನ್ನಡಿಗರಿಗೆ ಶೇ.5 ರಷ್ಟು ಮೀಸಲಾತಿಯನ್ನು ಪ್ರವೇಶಾತಿಯಲ್ಲಿ ಕಲ್ಪಿಸುವ ಬಗ್ಗೆ. | ಗಡಿನಾಡು / ಹೊರನಾಡು ಕನ್ನಡಿಗರಿಗೆ ಶೇ.5 ರಷ್ಟು ಮೀಸಲಾತಿಯನ್ನು ಪ್ರವೇಶಾತಿ ಸಮಯದಲ್ಲಿ ನೀಡಲು ಸಭೆಯು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 07 | 2018–19.ಸಾ.ವಿ.ಪ.04 ಶೈ.ವಿ–02 | ಸ್ನಾತಕೋತ್ತರ ಸಮಾಜಕಾರ್ಯ ವಿಷಯದ ಪರಿಷ್ಕೃತ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ಸ್ನಾತಕೋತ್ತರ ಸಮಾಜಕಾರ್ಯ ವಿಷಯದ ಪರಿಷ್ಕೃತ ಅಧ್ಯಯನ ಮಂಡಳಿಯನ್ನು ರಚಿಸಿರುವ ಕ್ರಮವನ್ನು ಸ್ಥಿರೀಕರಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 08 | 2018–19.ಸಾ.ವಿ.ಪ.04 ಶೈ.ವಿ–03 | P.G Diploma in Environmental Impact assessment and Safety Management ಕೋರ್ಸ್‌ನ ವಿನಿಯಮ ಮತ್ತು ಪಠ್ಯಕ್ರಮವನ್ನು ಅನುಮೋದಿಸುವ ಕುರಿತು | P.G Diploma in Environmental Impact assessment and Safety Management ಕೋರ್ಸ್‌ನ ವಿನಿಯಮ ಮತ್ತು ಪಠ್ಯಕ್ರಮವನ್ನು ಅನುಮೋದಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 09 | 2018–19.ಸಾ.ವಿ.ಪ.04 ಶೈ.ವಿ–04 | ಸ್ನಾತಕ ಪದವಿಯ ಮಹಿಳಾ ಅಧ್ಯಯನ ವಿಷಯದ ಅಧ್ಯಯನ ಮಂಡಳಿಯನ್ನು ಪರಿಷ್ಕರಿಸಿ ಪುನರ್ರಚಿಸಿರುವ ಕುರಿತು – ಸ್ಥಿರೀಕರಣ ಕೋರಿ | ಸ್ನಾತಕ ಪದವಿಯ ಮಹಿಳಾ ಅಧ್ಯಯನ ವಿಷಯದ ಅಧ್ಯಯನ ಮಂಡಳಿಯನ್ನು ಪರಿಷ್ಕರಿಸಿ ಪುನರ್ರಚಿಸಿರುವ ಕ್ರಮವನ್ನು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 10 | 2018–19.ಸಾ.ವಿ.ಪ.04 ಶೈ.ವಿ–05 | ಸ್ನಾತಕ ಪದವಿಯ ಸಮಾಜಶಾಸ್ತ್ರ ಮತ್ತು ಉರ್ದು ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚಿಸಿರುವ ಕುರಿತು – ಸ್ಥಿರೀಕರಣ ಕೋರಿ | ಸ್ನಾತಕ ಪದವಿಯ ಸಮಾಜಶಾಸ್ತ್ರ ಮತ್ತು ಉರ್ದು ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಿಸಿತು ಹಾಗೂ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 11 | 2018–19.ಸಾ.ವಿ.ಪ.04 ಶೈ.ವಿ–06 | ಬಿ.ಎ. ಪದವಿಯ ಆರನೇ ಸೆಮಿಸ್ಟರ್‌ನ ಪತ್ರಿಕೆ 08 (ಬಿ) ನ ಪರಿಷ್ಕೃತ ಪಠ್ಯಕ್ರಮದ ಅನುಮೋದನೆಗಾಗಿ ಹಾಗೂ 2019–20ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲು ಅನುಮತಿ ಕೋರಿ | ಬಿ.ಎ. ಪದವಿಯ ಆರನೇ ಸೆಮಿಸ್ಟರ್‌ನ ಪತ್ರಿಕೆ 08 (ಬಿ) ನ ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಿ ಹಾಗೂ 2019–20ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲು ತೀರ್ಮಾನಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 12 | 2018–19.ಸಾ.ವಿ.ಪ.04 ಶೈ.ವಿ–07 | ಸ್ನಾತಕ ಪದವಿಯ (ಬಿ.ಎ.) ಐದನೇ ಸೆಮಿಸ್ಟರ್‌ನ ಐಚ್ಛಿಕ ಕನ್ನಡ ವಿಷಯದ ಪತ್ರಿಕೆ–05 & 06ಗಳ ಸಿ.ಬಿ.ಸಿ.ಎಸ್. ಪಠ್ಯಕ್ರಮವನ್ನು 2018–19 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಬಗ್ಗೆ–ಸ್ಥಿರೀಕರಣ ಕೋರಿ | ಸ್ನಾತಕ ಪದವಿಯ (ಬಿ.ಎ.) ಐದನೇ ಸೆಮಿಸ್ಟರ್‌ನ ಐಚ್ಛಿಕ ಕನ್ನಡ ವಿಷಯದ ಪತ್ರಿಕೆ–05 & 06ಗಳ ಸಿ.ಬಿ.ಸಿ.ಎಸ್. ಪಠ್ಯಕ್ರಮವನ್ನು 2018–19ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮವನ್ನು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| 13 | 2018–19.ಸಾ.ವಿ.ಪ.04 ಶೈ.ವಿ–08 | ಸ್ನಾತಕ ಪದವಿಯ ಮಹಿಳಾ ಅಧ್ಯಯನ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕುರಿತು – ಸ್ಥಿರೀಕರಣ ಕೋರಿ | ಸ್ನಾತಕ ಪದವಿಯ ಮಹಿಳಾ ಅಧ್ಯಯನ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

| | | | |
|---|---|---|---|
| 14 | 2018-19.ಸಾ.ವಿ.ಪ.04<br>ಶೈ.ವಿ-09 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕ್ರಮವನ್ನು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| | | ಹೆಚ್ಚುವರಿ ಕಾರ್ಯಸೂಚಿಗಳು | |
| | | ಪರೀಕ್ಷಾಂಗ ವಿಭಾಗ | |
| 15 | 2018-19.ಸಾ.ವಿ.ವಿ.04<br>ಪ.ವಿ-01 | ಅಂಕಪಟ್ಟಿಗಳಲ್ಲಿ Entered, Verified ಮತ್ತು Scrutiny ಮಾಡಿದ ಸಿಬ್ಬಂದಿಯವರ ಹೆಸರಿನ ಮೊಹರು ಮತ್ತು ಸಹಿಯನ್ನೊಳಗೊಂಡ ಅಂಕಪಟ್ಟಿಗಳನ್ನು ವಿತರಿಸುವ ಬಗ್ಗೆ. | ಇನ್ನುಮುಂದೆ ನಡೆಯುವ ವಿವಿಧ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದ ಅಂಕ ಪಟ್ಟಿಗಳನ್ನು ಮುದ್ರಿಸಿ ವಿತರಿಸುವಾಗ ಕುಲಸಚಿವ (ಪರೀಕ್ಷಾಂಗ) ರವರ Facsimile ನೊಂದಿಗೆ ಅಂಕಪಟ್ಟಿಗಳಲ್ಲಿ Entered, Verified ಮತ್ತು Scrutiny ಮಾಡಿದ ಸಿಬ್ಬಂದಿಯವರ ಹೆಸರಿನ ಮೊಹರು ಮತ್ತು ಸಹಿಯನ್ನೊಳಗೊಂಡ ಅಂಕಪಟ್ಟಿಗಳನ್ನು ವಿತರಿಸಲು ಅನುಮೋದನೆ ನೀಡಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |
| | | ಶೈಕ್ಷಣಿಕ ವಿಭಾಗ | |
| 16 | 2018-19.ಸಾ.ವಿ.ಪ.04<br>ಶೈ.ವಿ-01 | ಸ್ನಾತಕ ಪದವಿಯ (ಬಿ.ಎ.) ಆರನೇ ಸೆಮಿಸ್ಟರ್‌ನ ಐಚ್ಛಿಕ ಕನ್ನಡ ವಿಷಯದ ಪತ್ರಿಕೆ-07 ಮತ್ತು 08 ಗಳ ಸಿ.ಬಿ.ಸಿ.ಎಸ್. ಪಠ್ಯಕ್ರಮವನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಬಗ್ಗೆ - ಸ್ಥಿರೀಕರಣ ಕೋರಿ. | ಸ್ನಾತಕ ಪದವಿಯ (ಬಿ.ಎ.) ಆರನೇ ಸೆಮಿಸ್ಟರ್‌ನ ಐಚ್ಛಿಕ ಕನ್ನಡ ವಿಷಯದ ಪತ್ರಿಕೆ-07 ಮತ್ತು 08 ಗಳ ಸಿ.ಬಿ.ಸಿ.ಎಸ್. ಪಠ್ಯಕ್ರಮವನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮವನ್ನು ಸ್ಥಿರೀಕರಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು. |

3/1

ಕುಲಸಚಿವರು

ಮಾನ್ಯ ಕುಲಪತಿಯವರು